ದಿನಾಂಕ **20-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಶ್ರೀ ಎ ಎಮ್ ವಿ ಪ್ರತಿವಾದಿ ಪರ ವಕೀಲರಿಂದ -

ಸರ್ವೆ ನಂ. 244/4 ರ ರ ಜಮೀನು ಮೂಲತಃ ರಾಜಾ ಲಖಮಗೌಡಾ ಸರ ದೇಸಾಯಿ ಇವರಿಗೆ ಸೇರಿದ್ದು. ಎಲ್ಲಿಮುನ್ನೋಳಿ ಗ್ರಾಮದಲ್ಲಿ ಎಲ್ಲಾ ಜಮಿನುಗಳು ರಾಜಾ ಲಖಮಗೌಡಾ ಸರ ದೇಸಾಯಿ ಇವರಿಗೆ ಸೇರಿದ್ದವು ಎಂದರೆ ಸರಿ . ಜಮೀನುಗಳನ್ನು ಯಾರು ಯಾರು ಚಾಕರಿ ಮಾಡುತ್ತಿದ್ದರೋ ಮತ್ತು ಗೇಣಿ ಮಾಡುತ್ತಿದ್ದರೊ ಅವರಿಗೆ ದಾನಪತ್ರದ ಮುಾಲಕ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 244/1 ರ ಒಟ್ಟು ಕ್ಷೇತ್ರ 3 ಎಕರೆ 33 ಗುಂಟೆ ಇರುತ್ತದೆ. ಸರ್ವೇ ನಂ. 244/5 ರ ಒಟ್ಟು ಕ್ಷೇತ್ರ 1 ಎಕರೆ 22 ಗುಂಟೆ ಇರುತ್ತದೆ. ಸರ್ವೆ ನಂ. 244/4, 244/1 ಮತ್ತು 244/5 ರ ಜಮೀನುಗಳಿಗೆ ರಾಜಾ ಲಖಮಗೌಡಾ ಸರ ದೇಸಾಯಿ ಇವರ ಹೆಸರು ಕಡಿಮೆ ಆಗಿ ರುಧ್ರಾಕ್ಷಿ ಮಠ ಶಿವಬಸವ ಸ್ವಾಮಿಗಳು, ಗುರುವೀರಭದ್ರ ಸ್ವಾಮಿಗಳು ಎಂದು ಹೆಸರು ನಮೂದು ಆಗಿವೆ ಎಂದರೆ ಸರಿ .

ಬಸಪ್ಪಾ ರಾಯಪ್ಪ ತೋರಣಹಳ್ಳಿ ಇವರು ನಮ್ಮ ದೂರದ ಸಂಬಂಧಿಕರು. ಅವರು ನಮ್ಮ ಅಜ್ಜನ ತಾಯಿಯ ಕಡೆಯವರು. ಬಸವಂತ ಸಿದ್ದಪ್ಪ ಮಾಳಗಿ ಇವರು ನಮ್ಮ ಅಜ್ಜ. ಬಸಪ್ಪಾ ರಾಯಪ್ಪ ತೋರಣಹಳ್ಳಿ ಮತ್ತು ಬಸವಂತ ಸಿದ್ದಪ್ಪ ಮಾಳಗಿ ಇವರು ಇಬ್ಬರೂ ಸೇರಿ ಮೂರು ಸರ್ವೆ ನಂಬರಗಳಿಗೆ ಭೂನ್ಯಾಯ ಮಂಡಳಿ ಇವರಿಗೆ ಫಾರ್ಮ ನಂ. 7 ಸಲ್ಲಿಸಿದ್ದರು ಎಂದರೆ ಸರಿಯಲ್ಲ.

ನಮ್ಮ ಅಜ್ಜ ಬಸವಂತ ಸಿದ್ದಪ್ಪ ಮಾಳಗಿ ಇವರು ಸರ್ವೆ ನಂ. 244/4, 244/11 ಮತ್ತು 244/3 ರ 3 ಜಮೀನುಗಳಿಗೆ ಫಾರ್ಮ ನಂ. 7 ಸಲ್ಲಿಸಿದ್ದರು. ಬಸಪ್ಪಾ ರಾಯಪ್ಪ ತೋರಣಹಳ್ಳಿ ಇವರು ಸರ್ವೆ ನಂ. 244/1 ಮತ್ತು 244/5 ರ ಜಮೀನುಗಳಿಗೆ ಫಾರ್ಮ ನಂ. 7 ಸಲ್ಲಿಸಿದ್ದರು. ಈ ಎರಡೂ ಜಮೀನುಗಳಿಗೆ ಮಾತ್ರ ಬಸಪ್ಪಾರಾಯಪ್ಪ ತೋರಣಹಳ್ಳಿ ಇವರು ಫಾರ್ಮ ನಂ. 7 ಸಲ್ಲಿಸಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಇಬ್ಬರೂ ಬಸವಂತ ಸಿದ್ದಪ್ಪ ಮಾಳಗಿ ಮತ್ತು ಬಸಪ್ಪಾ ರಾಯಪ್ಪಾ ತೋರಣಹಳ್ಳಿ ಇಬ್ಬರೂ ಸೇರಿ ರೈತನಾತೆಯಿಂದ 3 ಸರ್ವೆನಂಬರ ಜಮಿನುಗಳನ್ನು ಸಾಗು ಮಡುತ್ತಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ಇಬ್ಬರ ಹೆಸರಿನಲ್ಲಿ ಭೂನ್ಯಾಯ ಮಂಡಳಿ ಫಾರ್ಮ ನಂ. 10 ನ್ನು ಮಂಜೂರು ಮಾಡಿರುತ್ತದೆ ಎಂದರೆ ಸರಿಯಲ್ಲ.

ಬಸವಂತ ರಾಯಪ್ಪಾ ತೋರಣಹಳ್ಳಿ ರವರ ಮಗಳನ್ನು ಬಸವಂತ ಸಿದ್ದಪ್ಪ ಮಾಳಗಿ ಇವರಿಗೆ ಮದುವೆ ಮಾಡಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಮ್ಮ ಅಜ್ಜ ಮೂರು ಜಮೀನುಗಳನ್ನು ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ.

**( ಈಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ